ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಈ ತಾಲ್ಲೂಕಿನಲ್ಲಿ ಈ ಕೆಳಕಂಡಂತೆ ಹಂದಿಗೋಡು ಖಾಯಿಲೆಗೆ ಈಡಾಗಿರುವರು

೧) ಬರ್ವೆ ಗ್ರಾಮ — ೧೩ ಪ್ರಕರಣಗಳು
೨) ಪುರ ಗ್ರಾಮ — ೩ ಪ್ರಕರಣಗಳು
೩) ಅತ್ತಿಮನೆ — ೨ ಪ್ರಕರಣಗಳು

ಆ) ಆರೋಗ್ಯ ಮಂತ್ರ್ರು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಪ್ರಸ್ತಾವನೆ ಇಲ್ಲ.

ಅಬ್ಕಾರಿ ಇಲಾಖೆಯಲ್ಲಿ ರಿಹ್ಯಾಬಿಲಿಟೇಷನ್ ಪ್ರೋಗ್ರಾಮ್

೨೩೫೫. ಶ್ರೀ ಬಿ.ಸ್ವಾಮಿರಾವ್ (ಹೊಸನಗರ) —ಮಾನ್ಯ ರಾಜ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಬಕಾರಿ ಇಲಾಖೆಯಲ್ಲಿ ರಿಹ್ಯಾಬಿಲಿಟೇಷನ್ ಪ್ರೋಗ್ರಾಮ್ ಯಾವಾಗ ಪ್ರಾರಂಭವಾಯಿತು ?

ಆ) ಸದರಿ ಪ್ರೋಗ್ರಾಮ್‌ಗಾಗಿ ನೇಮಿಸಿಕೊಳ್ಳಲಾದ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು ?

ಇ) ಪ್ರೋಗ್ರಾಮ್ ಪ್ರಾರಂಭವಾದಂದಿನಿಂದ ಇಲ್ಲಿಯವರೆಗೆ ಇದಕ್ಕೆ ವೆಚ್ಚವಾದ ಹಣವೆಷ್ಟು ? (ಬಾಬುವಾರು ವಿವರ ನೀಡುವುದು)

ಈ) ಇದರ ಪ್ರಗತಿ ಏನು ? ಇದೂ ಆರಣ್ಯ ಇಲಾಖೆಯ ಜಂಟಿ ಕಾರ್ಯಕ್ರಮವೇ ?

ಶ್ರೀ ಡಿ. ಬಿ. ಇನಾಂದರ್ (ರಾಜ್ಯ ಅಬಕಾರಿ ಸಚಿವರು).—

ಅ) ಇಂತಹ ರಿಹ್ಯಾಬಿಲಿಟೇಶನ್ ಪ್ರೋಗ್ರಾಮ್ ಯಾವುದೂ ಇಲ್ಲ.

ಆ) ಇಲ್ಲ.

ಇ) (ಅ)ಗೆ ಕೊಟ್ಟಿರುವ ಉತ್ತರದಿಂದ ಇವಕ್ಕೆ ಉತ್ತರ ಉದ್ಭವಿಸುವುದಿಲ್ಲ.

ಶಿವಮೊಗ್ಗ ಜಿಲ್ಲೆಗೆ ಮೆಡಿಕಲ್ ಕಾಲೇಜ್ ಮಂಜೂರಾತಿ ಕುರಿತು.

೨೬೬೬. ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆಗೆ ಮೆಡಿಕಲ್ ಕಾಲೇಜು ಬೇಕೆಂಬ ಬೇಡಿಕೆ ಎಷ್ಟು ವರ್ಷದಿಂದ ಸರ್ಕಾರದವರ ಮುಂದಿದೆ.

ಆ) ಇದುವರೆಗೆ ಮಂಜೂರಾಗದೆ ಇರಲು ಕಾರಣವೇನು ?

ಶ್ರೀ ಬಿ. ರಾಚಯ್ಯ (ಆರೋಗ್ಯ ಸಚಿವರು).—

ಅ) ೧೯೮೭ರಲ್ಲಿ ೩ ಅರ್ಜಿಗಳು ಬಂದಿದ್ದು ಅವುಗಳನ್ನು ತಿರಸ್ಕರಿಸಲಾಗಿತ್ತು. ಈಗ ಒಂದು ಅರ್ಜಿ ಬಂದಿದ್ದು ಅದು ಪರಿಶೀಲನೆಯಲ್ಲಿದೆ.

ಆ) ೧೯೮೭ನೇ ಸಾಲಿನಲ್ಲಿನ ಅರ್ಜಿಗಳನ್ನು ತಿರಸ್ಕರಿಸಲಾಗಿತ್ತು ಕಾರಣ ಈಗಾಗಲೇ ರಾಜ್ಯದಲ್ಲಿರುವ ಬಹಳಷ್ಟು ವೈದ್ಯಕೀಯ ಕಾಲೇಜುಗಳಿಗೆ ಭಾರತೀಯ ವೈದ್ಯ ಮಂಡಳಿಯ ಮನ್ನಣೆ ಪಡೆಯದೆ ಇರುವುದರಿಂದ.